ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು):

ಅ) ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಹಾಗೂ ಕೇಂದ್ರ ಪುರಸ್ಕೃತ ಯೋಜನೆಯಡಿ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ.

1) ಉತ್ತರ ಕರ್ನಾಟಕ ನಗರ ಹೂಡಿಕಾ ಕಾರ್ಯಕ್ರಮ ಯೋಜನೆ **(NKUSIP)**

2) ಕರ್ನಾಟಕ ನೀರು ಸರಬರಾಜು ಕ್ಷೇತ್ರ ಅಭಿವೃದ್ಧಿ ಯೋಜನೆ **(KUWASIP)**

3) ಸಣ್ಣ ಮತ್ತು ಮಧ್ಯಮ ವರ್ಗದ ಪಟ್ಟಣಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ **(CSS)**

ಆ) 1) ಉತ್ತರ ಕರ್ನಾಟಕ ನಗರ ಹೂಡಿಕಾ ಕಾರ್ಯಕ್ರಮ ಯೋಜನೆ ಅಡಿಯಲ್ಲಿ **(NKUSIP)** ರೂ. 165.75 ಲಕ್ಷಗಳು

2) ಕರ್ನಾಟಕ ನೀರು ಸರಬರಾಜು ಕ್ಷೇತ್ರ ಅಭಿವೃದ್ಧಿ ಯೋಜನೆಗೆ **(KUWASIP)** ರೂ. 47.14 ಲಕ್ಷಗಳು

3) ಕೇಂದ್ರ ಪುರಸ್ಕೃತ ಯೋಜನೆಯಡಿ ಸಣ್ಣ ಮತ್ತು ಮಧ್ಯಮ ವರ್ಗದ ಪಟ್ಟಣಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಗೆ **(CSS)** ರೂ. 561.68 ಲಕ್ಷಗಳು.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

1449 (1677) ಶ್ರೀ ಹೊನ್ನಾಳ್ಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮ್ಯಾಂಗ್‌ನೀಸ್ ಲಾರಿ ಸಂಚಾರ ನಿಷೇಧ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಮ್ಯಾಂಗ್‌ನೀಸ್ ಲಾರಿ ಸಂಚಾರ ನಿಷೇಧ ಯಾವ ಯಾವ ಶಹರಗಳಲ್ಲಿ ಜಾರಿಯಲ್ಲಿರುತ್ತದೆ; (ನಗರವಾರು ವಿವರ ನೀಡುವುದು)

ಇ) ಮ್ಯಾಂಗ್‌ನೀಸ್ ಲಾರಿ ಸಂಚಾರ ನಿಷೇಧದಿಂದ ಲಾರಿ ಮಾಲೀಕರಿಗೆ ಆಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ದಿನಕ್ಕೆ ಎಷ್ಟು ತಾಸು ಮ್ಯಾಂಗ್‌ನೀಸ್ ಲಾರಿಗಳು ಸಂಚಾರ ಮಾಡುತ್ತವೆ ಹಾಗೂ ಇದರಿಂದ ಆಗುವ ಹಾನಿ ಹಾಗೂ ತೊಂದರೆಗಳಾವುವು?

ಉ) ಮ್ಯಾಂಗ್‌ನೀಸ್ ಲಾರಿ ಸಂಚಾರ ನಿಷೇಧ ಸಕಾರ ರೂಪಿಸಿದ ಕಾಯ್ದೆಯೇ;

ಊ) ಹಾಗಿಲ್ಲದಿದ್ದಲ್ಲಿ, ಪ್ರದೇಶಿಕ ರೂಪದಲ್ಲಿ ನಿರ್ಬಂಧ ಹೇರಿದ ಕಾಯ್ದೆಯೇ(ವಿವರ ನೀಡುವುದು)

ಶ್ರೀ ಎನ್ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) ಹೌದು.

ಆ) ಪ್ರಸ್ತುತ ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಕಾರವಾರ, ಬಳ್ಳಾರಿ, ಹೊಸಪೇಟೆ, ಕೊಪ್ಪಳ, ಹಗರಿ ಸರಹದ್ದುಗಳಲ್ಲಿ ಮ್ಯಾಂಗ್‌ನೀಸ್ ಲಾರಿ ಸಂಚಾರವನ್ನು ನಿರ್ಬಂಧಿಸಿ ಸಂಬಂಧಿಸಿದ ಜಿಲ್ಲಾ ದಂಡಾಧಿಕಾರಿಗಳು ಹಾಗೂ ಪೊಲೀಸ್ ಕಮೀಷನರ್‌ರವರು ಅಧಿಸೂಚನೆಗಳನ್ನು ಕೇಂದ್ರ ಮೋಟಾರು ವಾಹನ ಕಾಯ್ದೆ 1988 ರ ಕಲಂ 115 ಅಡಿಯಲ್ಲಿ ಹೊರಡಿಸಿರುತ್ತಾರೆ.

ಇ) ಹೌದು.

ಈ) ಈ ಕೆಳಕಂಡ ಅವಧಿಯಲ್ಲಿ ಮ್ಯಾಂಗ್‌ನೀಸ್ ಲಾರಿಗಳ ಸಂಚಾರಕ್ಕೆ ಅವಕಾಶವಿರುತ್ತದೆ.

1) ಹುಬ್ಬಳ್ಳಿ–ಧಾರವಾಡ –06 ಘಂಟೆಗಳು (ರಾತ್ರಿ 11:00 ರಿಂದ ಬೆಳಿಗ್ಗೆ 5:00 ರವರೆಗೆ

2) ಬೆಳಗಾವಿ ನಗರ ಪಾಲಿಕೆ ವ್ಯಾಪ್ತಿಯಲ್ಲಿ 11:00 ಘಂಟೆಗಳು (ರಾತ್ರಿ 9:00 ಘಂಟೆಯಿಂದ ಬೆಳಿಗ್ಗೆ 8:00 ಘಂಟೆಯವರೆಗೆ)

3) ಕಾರವಾರ ಜಿಲ್ಲೆಯಾದ್ಯಂತ 15 ಘಂಟೆಗಳು (ಬೆಳಿಗ್ಗೆ 10:00 ರಿಂದ 4:00 ರವರೆಗೆ ಮತ್ತು ರಾತ್ರಿ 10:00 ರಿಂದ ಬೆಳಿಗ್ಗೆ 7:00 ರವರೆಗೆ)

4) ಬಳ್ಳಾರಿ ನಗರ 9:00 ಘಂಟೆಗಳು (ರಾತ್ರಿ 9:00 ರಿಂದ ಬೆಳಿಗ್ಗೆ 6:00 ರವರೆಗೆ)

5) ಸಂಡೂರು 9:00 ಘಂಟೆಗಳು (ರಾತ್ರಿ 9:00 ರಿಂದ ಬೆಳಿಗ್ಗೆ 6:00 ರವರೆಗೆ)

6) ಕೊಪ್ಪಳ 6:00 ಘಂಟೆಗಳು

ವಾಹನ ಸಂಚಾರ ದಟ್ಟಣೆ ಸಮಯದಲ್ಲಿ ಅಪಘಾತಗಳನ್ನು ನಿರ್ಬಂಧಿಸಲು ಈ ಸಮಯವನ್ನು ನಿಗಧಿಗೊಳಿಸಲಾಗಿದೆ.

ಊ ಮತ್ತು ಊ) ಹೌದು, ಪೊಲೀಸ್ ಕಾಯ್ದೆ 1963 ರ ಕಲಂ–31 ಹಾಗೂ ಕೇಂದ್ರ ಮೋಟಾರು ವಾಹನ ಕಾಯ್ದೆ 1988 ರ ಕಲಂ– 115 ರಡಿಯಲ್ಲಿ ಪ್ರದಾತ್ತವಾದ ಅಧಿಕಾರವನ್ನು ಬಳಸಿಕೊಂಡು ರಾಜ್ಯ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಪ್ರತ್ಯಾಯೋಜಿಸಲ್ಪಟ್ಟ ಪ್ರಾಧಿಕಾರವು ಮ್ಯಾಂಗ್‌ನೀಸ್ ಲಾರಿಗಳ ಸಂಚಾರವನ್ನು ನಿರ್ಬಂಧಿಸುವ ಅಧಿಕಾರವನ್ನು ಆಯಾ ವಿಭಾಗದ ಜಿಲ್ಲಾಧಿಕಾರಿಗಳು ಅಥವಾ ಪೊಲೀಸ್ ಆಯುಕ್ತರುಗಳು ವಾಹನಗಳ ಸಂಚಾರ ದಟ್ಟಣೆ ಮತ್ತು ರಸ್ತೆಗಳು ಹಾಳಾಗುತ್ತಿರುವುದರಿಂದ, ಸಂಚಾರ ನಿಷೇಧವನ್ನು ಜಾರಿಗೊಳಿಸಿರುತ್ತಾರೆ.

1451 (1361) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಬೆಂಗಳೂರು ಮೆಟ್ರೋ ರೈಲ್‌ನ್ನು ಅನುಷ್ಠಾನಗೊಳಿಸುವುದಕ್ಕೋಸ್ಕರ ಭೂಮಿ ಮತ್ತು ಕಟ್ಟಡಗಳನ್ನು ಎಷ್ಟು ವಶಪಡಿಸಿಕೊಳ್ಳಲಾಗಿದೆ; ಇದಕ್ಕಾಗಿ ಬೆಂಗಳೂರು ಮೆಟ್ರೋ ರೈಲ್ ಎಷ್ಟು ಸ್ಥಳಗಳನ್ನು ಗುರುತಿಸಲಾಗಿದೆ;

ಬಿ) ಮೆಟ್ರೋ ರೈಲ್ ಎಷ್ಟು ಕಿಲೋ ಮೀಟರ್ ಒಳಗೊಂಡಿರುತ್ತದೆ, ಮತ್ತು ನಿರ್ಮಾಣ ಕೆಲಸದ ಹಂತ (ನಕಾಶೆ ನಕ್ಷೆಯೊಂದಿಗೆ ವಿವರ ನೀಡುವುದು)?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಎ) ಬೆಂಗಳೂರು ಮೆಟ್ರೋ ರೈಲ್ ಅನುಷ್ಠಾನಗೊಳಿಸಲು, 676 ಸ್ಥಳಗಳನ್ನು ಭೂಸ್ವಾಧಿನಕ್ಕೆ ಗುರುತಿಸಲಾಗಿದೆ.